CC

# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಮುನಿರಾಜುಗೌಡ ಪಿ.ಎಂ.**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 556**

**ಉತ್ತರಿಸಬೇಕಾದ ದಿನಾಂಕ : 11.07.2023**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಗೃಹ ನಿರ್ಮಾಣ ಸಹಕಾರ ಸಂಘದ ವತಿಯಿಂದ ಅಧ್ಯಕ್ಷರು ಕೋಲಾರ ತಾಲ್ಲೂಕಿನಲ್ಲಿ ಸಹಕಾರ ನಗರ ಎಂಬ ಬಡಾವಣೆಯನ್ನು ನಿರ್ಮಿಸಲಾಗಿದೆಯೇ; ನಿರ್ಮಿಸಲಾಗಿದ್ದಲ್ಲಿ ಸದರಿ ಬಡಾವಣೆಯಿಂದ ಸಂಘಕ್ಕೆ ಬಂದ ಲಾಭಾಂಶ ಎಷ್ಟು; | ಕೋಲಾರ ತಾಲ್ಲೂಕು ಗೃಹ ನಿರ್ಮಾಣ ಸಹಕಾರ ಸಂಘ ನಿ., ಕೋಲಾರ ಈ ಸಂಘವು ನಂ:ಡಿಆರ್‌ಕೆ/ನೋಂದಣಿ/77/38443/2008-09 ದಿನಾಂಕ:5/1/2009 ರ ರೀತ್ಯಾ ಉಪ ನಿಬಂಧಕರ ಕಛೇರಿ, ಕೋಲಾರ ಜಿಲ್ಲೆ ಇಲ್ಲಿ ನೋಂದಣಿಯಾಗಿದ್ದು, ಸಂಘದಲ್ಲಿ ಒಟ್ಟು 571 ಸದಸ್ಯರಿದ್ದು, ಸಹ ಸದಸ್ಯರು ಇರುವುದಿಲ್ಲ. ಸದರಿ ಸಂಘವು ಸಹಕಾರ ನಗರ ಎಂಬ ಬಡಾವಣೆಯನ್ನು ರಚಿಸಿದ್ದು, ಈ ಬಡಾವಣೆಯಲ್ಲಿ ಒಟ್ಟು 297 ನಿವೇಶನಗಳನ್ನು ರಚಿಸಿರುತ್ತಾರೆ. ಸದರಿ ನಿವೇಶನಗಳನ್ನು ನಿವೇಶನ ಠೇವಣಿ ಪಾವತಿಸಿರುವ ತನ್ನ 297 ಸದಸ್ಯರಿಗೆ ನೋಂದಣಿ ಮಾಡಿಕೊಡಲಾಗಿದೆ. ನಿವೇಶನ ಠೇವಣಿ ಪಾವತಿಸಿರುವ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡುವಂತಹ ಪ್ರಕರಣಗಳು ಬಾಕಿ ಇರುವುದಿಲ್ಲ. ಸದಸ್ಯರಿಂದ ಹಣ ಸಂಗ್ರಹಿಸಿರುವ ನಿವೇಶನ ಠೇವಣಿ ಮೊತ್ತ ರೂ.12,38,40,353/-ಗಳಾಗಿದ್ದು, ಈ ಪೂರ್ಣ ಠೇವಣಿ ಮೊತ್ತವನ್ನು ಬಡಾವಣೆ ಅಭಿವೃದ್ಧಿದಾರರಾದ ಕಾಮಧೇನು ಇನ್‌ಫ್ರಾ ಪ್ರೈವೇಟ್ ಲಿ., ಇವರಿಗೆ ಪಾವತಿಸಲಾಗಿರುತ್ತದೆ. ಆದ್ದರಿಂದ ಬಡಾವಣೆ ರಚಿಸಿ ನಿವೇಶನ ಹಂಚಿಕೆ ಮಾಡಿ, ನೋಂದಣಿ ಮಾಡಿಕೊಟ್ಟಿರುವ ಪ್ರಕ್ರಿಯೆಯಲ್ಲಿ ಸಂಘಕ್ಕೆ ಯಾವುದೇ ಲಾಭ ಬಂದಿರುವುದಿಲ್ಲ. |
| ಆ) | ಸದರಿ ಲಾಭಾಂಶದಲ್ಲಿ ಪಾವತಿಸಬೇಕಾದ ಆದಾಯ ತೆರಿಗೆ . ಎಷ್ಟು; ಎಷ್ಟು ಮೊತ್ತವನ್ನು ಇಲ್ಲಿಯವರೆಗೆ ಪಾವತಿಸಲಾಗಿದೆಯೇ; ಬಾಕಿ ಇರುವ ಮೊತ್ತವೆಷ್ಟು; ಗೃಹ ನಿರ್ಮಾಣ ಸಹಕಾರ | ಗುತ್ತಿಗೆದಾರರೊಂದಿಗೆ ಮಾಡಿಕೊಂಡಿದ್ದ ಒಡಂಬಡಿಕೆ ಕರಾರು ಒಪ್ಪಂದದಂತೆ ಕೋಲಾರ ತಾಲ್ಲೂಕು ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯರಿಂದ ನಿವೇಶನ ಮುಂಗಡ ಪಡೆದು ಅಷ್ಟೇ ಹಣವನ್ನು ಗುತ್ತಿಗೆದಾರರಿಗೆ ಪಾವತಿಸಲಾಗಿರುತ್ತದೆ. ಆದ್ದರಿಂದ ಸಂಘಕ್ಕೆ ಯಾವುದೇ ಲಾಭಾಂಶ ಬಂದಿರುವುದಿಲ್ಲ. ಹಾಗಾಗಿ ಲಾಭಾಂಶದ ಮೇಲೆ ಪಾವತಿಸಬೇಕಾದ ತೆರಿಗೆ ಯಾವುದು |

| | | |
|---|---|---|
| | ಸಂಘದವರು ಗುತ್ತಿಗೆದಾರರಿಂದ ಕಡಿತಗೊಳಿಸಿದ ಆದಾಯ ತೆರಿಗೆ ಮತ್ತು ಇತರೆ ಉಪಕರಣಗಳ ಮೊತ್ತವೆಷ್ಟು; ಸದರಿ ಮೊತ್ತವನ್ನು ಸಂಬಂಧಪಟ್ಟ ಇಲಾಖೆಗೆ ಪಾವತಿಸಲಾಗಿದೆಯೇ; ಪಾವತಿಸಿಲಾಗಿದ್ದಲ್ಲಿ ಪಾವತಿಸಿರುವ ವಿವರ ನೀಡುವುದು; ಪಾವತಿಸದಿದ್ದಲ್ಲಿ ತೆರಿಗೆಯನ್ನು ವಂಚಿಸಿದವರ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮವೇನು: | ಇರುವುದಿಲ್ಲ. ಆದರೆ ಗುತ್ತಿಗೆದಾರರಿಗೆ ಹಣ ಪಾವತಿಸುವ ಮುನ್ನ ಕಡಿತಗೊಳಿಸಿರುವ ರೂ.30,23,280/- ಗಳನ್ನು ಆದಾಯ ತೆರಿಗೆ ಇಲಾಖೆಗೆ ಸಂಘವು ಪಾವತಿಸಿರುವುದಿಲ್ಲ. |
| ಇ) | ಸದರಿ ಸಹಕಾರ ನಗರ ಗೃಹ ನಿರ್ಮಾಣ ಸಹಕಾರ ಸಂಘದ ನಿವೇಶನಗಳ ಮಾರಾಟಕ್ಕೆ, ನಿಗದಿಪಡಿಸಿದ ಬೆಲೆಗಿಂತ ಕಡಿಮೆ ಬೆಲೆಯನ್ನು ತೋರಿಸಿ ನೋಂದಣಿ ಮಾಡುವ ಮೂಲಕ ನೋಂದಣಿ ಮತ್ತು ಮುದ್ರಾಂಕ ಶುಲ್ಕ ವಂಚನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; | ಸಂಘವು ನಿರ್ಮಿಸಿರುವ ಸಹಕಾರ ನಗರ ಬಡಾವಣೆಯಲ್ಲಿ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡುವ ಸಂದರ್ಭದಲ್ಲಿ ಚದರಡಿ ಒಂದಕ್ಕೆ ರೂ.246/- ರಂತೆ ಹಣ ಸಂಗ್ರಹಿಸಿದ್ದು, ಅದೇ ಮೊತ್ತಕ್ಕೆ ನಿವೇಶನಗಳನ್ನು ಸದಸ್ಯರಿಗೆ ನೋಂದಣಿ ಮಾಡಿಕೊಡಲಾಗಿದೆ. ನಿವೇಶನಗಳನ್ನು ನೋಂದಣಿ ಮಾಡಿದ ಸಂದರ್ಭದಲ್ಲಿ ಸದರಿ ಬಡಾವಣೆಯ ನಿವೇಶನಗಳಿಗೆ ಸರ್ಕಾರಿ ಮೌಲ್ಯವು ಚದರಡಿ ಒಂದಕ್ಕೆ ರೂ.66.66/-ಗಳಾಗಿದ್ದು, ನಿಗದಿಪಡಿಸಿದ ಬೆಲೆ ಚದರಡಿ ಒಂದಕ್ಕೆ ರೂ.246/- ರಂತೆಯೇ ನಿವೇಶನಗಳನ್ನು ನೋಂದಣಿ ಮಾಡಿ ಕೊಟ್ಟಿರುವುದರಿಂದ ಸರ್ಕಾರಕ್ಕೆ ಮುದ್ರಾಂಕ ಶುಲ್ಕ ವಂಚಿಸಿರುವುದು ಕಂಡುಬಂದಿರುವುದಿಲ್ಲ. ಸದರಿ ಮುದ್ರಾಂಕ ಶುಲ್ಕವನ್ನು ಸಂಘದ ಸದಸ್ಯರು ಮುದ್ರಾಂಕ ಮತ್ತು ನೋಂದಣಿ ಇಲಾಖೆಗೆ ನೇರವಾಗಿ ಪಾವತಿಸಿರುತ್ತಾರೆ. ಆದಾಗ್ಯೂ, ನಿಗದಿಪಡಿಸಿದ ಬೆಲೆಗಿಂತ ಕಡಿಮೆ ದರದಲ್ಲಿ ಪಾವತಿಸಿ, ನೋಂದಣಿಯಾಗಿದ್ದಲ್ಲಿ ಕರ್ನಾಟಕ ಮುದ್ರಾಂಕ ಅಧಿನಿಯಮ 1957 ರ ಕಲಂ 45-ಎ (1) ಮತ್ತು 45-ಎ (2) ರ ಅವಕಾಶಗಳಂತೆ ಮುದ್ರಾಂಕ ಮತ್ತು ನೋಂದಣಿ ಇಲಾಖೆಯ ಜಿಲ್ಲಾ ನೋಂದಣಾಧಿಕಾರಿಗಳು ವಿಚಾರಣೆ ಕೈಗೆತ್ತಿಕೊಂಡು ಶುಲ್ಕದೊಂದಿಗೆ ಬಾಕಿ ಮೊತ್ತವನ್ನು ವಸೂಲು ಮಾಡಲು ಅವಕಾಶ ಇರುತ್ತವೆ. |

**ಸಿಒ 28 ಸಿಹೆಚ್‌ಎಸ್ 2023 (ಇ)**

K.N. Rajanna

**(ಕೆ. ಎನ್. ರಾಜಣ್ಣ)**
**ಸಹಕಾರ ಸಚಿವರು**